**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 10 ಪ್ರಾ.ಸಾ. : 10**

ಸಾಕ್ಷಿಯ ಹೆಸರು : ಸುದರ್ಶನ
ತಂದೆಯ ಹೆಸರು : ವಿಠ್ಠಲ ನಾಯ್ಕು
ವಯಸ್ಸು : 43 ವರ್ಷ
ಉದ್ಯೋಗ : ಆರಕ್ಷಕ ಮುಖ್ಯ ಪೇದೆ 572 , ಸಿಇಎನ್ ಅಪರಾಧ ಪೊಲೀಸ್ ಠಾಣೆ ಕಾರವಾರ
ವಾಸ : ಕಾರವಾರ

**ದಿನಾಂಕಃ 19-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 2009 ರಿಂದ 2014 ರವರೆಗೆ ಕರ್ನಾಟಕ ಲೋಕಾಯುಕ್ತ ಕಾರವಾರ ಠಾಣೆಯಲ್ಲಿ ಆರಕ್ಷಕ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಠಾಣೆಯಲ್ಲಿದ್ದಾಗ ದಿನಾಂಕ 16.09.2015 ರಂದು ಫಿರ್ಯಾದುದಾರ ರಾಮಾ ನಾಯ್ಕು ಠಾಣೆಗೆ ಹಾಜರಾಗಿ ದೂರನ್ನು ಆರಕ್ಷಕ ಉಪಾಧೀಕ್ಷಕರಾದ ಯು.ಎಸ್. ಶಿವಳ್ಳಿರವರಿಗೆ ನೀಡಿದರು. ಅದರ ಆಧಾರದ ಮೇಲೆ ಮೊಕದ್ದಮೆ ಸಂ. 5/2013 ಅನ್ನು ದಾಖಲಿಸಿದರು. ಅದು ಭೃಷ್ಟಾಚಾರ ನಿಷೇಧ ಅಧಿನಿಯಮ ಕಲಂ 7, 13(1)(ಡಿ) ಸಹಿತ 13(2) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು. ಮೂಲ ಪ್ರಥಮ ವರ್ತಮಾನ ವರದಿಯನ್ನು ದೋಸಾ-7 ರವರ ಕಡೆಯಿಂದ ನ್ಯಾಯಾಲಯಕ್ಕೆ ಕಳುಹಿಸಿದರು. ಪಂಚರನ್ನು ಕರೆತರುವಂತೆ ದೋಸಾ-6 ರವರನ್ನು ವಾಣಿಜ್ಯ ತೆರಿಗೆ ಇಲಾಖೆ ಮತ್ತು ಸಹಾಯಕ ಅಭಿಯಂತರರು ಹೆಸ್ಕಾಂ ಕಾರವಾರರವರ ಕಚೇರಿಗೆ ಕಳುಹಿಸಿದರು. ಮಧ್ಯಾಹ್ನ 3.00 ಗಂಟೆಗೆ ದೋಸಾ-2 ಮತ್ತು 3 ರವರು ಪಂಚರಾಗಿ ಸದರಿ ಕಚೇರಿಗಳಿಂದ ನಮ್ಮ ಠಾಣೆಗೆ ಬಂದರು. ಆಗ ದೋಸಾ-17 ಆರಕ್ಷಕ ಉಪಾಧೀಕ್ಷಕರು ದೂರಿನ ಪ್ರತಿಯನ್ನು ಸದರಿ ಪಂಚರಿಗೆ ನೀಡಿ ಓದಿ ಹೇಳಿದರು. ಫಿರ್ಯಾದಿಗೆ ಆರೋಪಿಗೆ ಕೊಡಬೇಕಿದ್ದ ಹಣವನ್ನು ಹಾಜರುಪಡಿಸಲು ಹೇಳಿದರು. ಫಿರ್ಯಾದಿ ಅದರಂತೆ ರೂ. 1,000/- ದ 2 ನೋಟು ಮತ್ತು ರೂ. 500/- ರ 2 ನೋಟುಗಳನ್ನು ಹಾಜರುಪಡಿಸಿದ . ನಂತರ ದೋಸಾ-17

ರವರು ದೋಸಾ–2 ರವರನ್ನು ಪಂಚ–1 ಎಂದು ಹಾಗೂ ದೋಸಾ–3 ರವರಿಗೆ ಪಂಚ–2 ಎಂದು ನೇಮಿಸಿದರು. ಪಂಚ–1 ರವರಿಗೆ ಫಿರ್ಯಾದಿ ಹಾಜರುಪಡಿಸಿದ ನೋಟುಗಳ ಸಂಖ್ಯೆಗಳನ್ನು ಓದಿ ಹೇಳಲು ತಿಳಿಸಿದರು. ಪಂಚ–1 ಅದನ್ನು ಓದಿ ಹೇಳಿದರು. ಅದನ್ನು ಪಂಚ–2 ಒಂದು ಹಾಳೆಯಲ್ಲಿ ಬರೆದುಕೊಂಡರು ದೋಸಾ–17 ರವರು ಆ ನೋಟುಗಳ ಸಂಖ್ಯೆಗಳನ್ನು ಆಗ ಪಂಚನಾಮೆಯಲ್ಲಿ ನಮೂದಿಸಿದರು. ನಂತರ ದೋಸಾ–17 ರವರು ದೋಸಾ–6 ರವರಿಗೆ ಆ ನೋಟುಗಳಿಗೆ ಫಿನಾಪ್ತಲಿನ್ ಪುಡಿ ಲೇಪನ ಮಾಡಲು ಹೇಳಿದರು. ಫಿನಾಪ್ತಲಿನ್ ಪುಡಿಯಿಂದ ಆಗ ಸ್ವಲ್ಪ ಪುಡಿಯನ್ನು ಪ್ರತ್ಯೇಕವಾಗಿ ತೆಗೆದು ಅದಕ್ಕೆ ವಸ್ತು ಸಂ. 1 ಎಂದು ಗುರುತಿಸಿದರು. ಫಿನಾಪ್ತಲಿನ್ ಪುಡಿ ಲೇಪನ ಮಾಡಿದ ನೋಟುಗಳನ್ನು ಪಂಚ–1 ರವರ ಕಡೆಯಿಂದ ದೋಸಾ–17 ರವರು ಎಣಿಕೆ ಮಾಡಿಸಿದರು. ದೋಸಾ–8 ರವರಿಗೆ ಎರಡು ಪಿಂಗಾಣಿ ಬಟ್ಟಲುಗಳನ್ನು ಚೆನ್ನಾಗಿ ತೊಳೆದು ಸ್ವಚ್ಚ ಮಾಡುವಂತೆ ಹೇಳಿದರು. ದೋಸಾ–8 ರವರು ಅದನ್ನು ಸ್ವಚ್ಚಗೊಳಿಸಿದರು. ನಂತರ ಅದಕ್ಕೆ ದೋಸಾ–17 ರವರು ಸೂಚಿಸಿದ ಪ್ರಕಾರ ಭಟ್ಟಿ ಇಳಿಸಿದ ನೀರನ್ನು ಪಿಂಗಾಣಿ ಬಟ್ಟಲಿನಲ್ಲಿ ಹಾಕಿದರು. ಆಗ ಉಪಯೋಗಿಸಿದ ಭಟ್ಟಿ ಇಳಿಸಿದ ನೀರಿನಲ್ಲಿ ಮಾದರಿಗಾಗಿ ಒಂದು ಖಾಲಿ ಪಾವಲಿ ಬಾಟಲಿಯಲ್ಲಿ ಸಂಗ್ರಹಿಸಿದರು. ಅದಕ್ಕೆ ವಸ್ತು ಸಂ. 2 ಎಂದು ಗುರುತಿಸಿದರು. ನಂತರ ಪಿಂಗಾಣಿ ಬಟ್ಟಲಿನಲ್ಲಿ ಹಾಕಿದ್ದ ಭಟ್ಟಿ ಇಳಿಸಿದ ನೀರಿಗೆ ಸೋಡಿಯಂ ಕಾರ್ಬೋನೇಟ್ ಪುಡಿ ಹಾಕುವಂತೆ ಸೂಚಿಸಿದರು. ದೋಸಾ–8 ರವರು ಅದೇ ಪ್ರಕಾರ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಬಟ್ಟಲಿಗೆ ಹಾಕಿದರು. ಆಗ ಉಪಯೋಗಿಸಿದ ಸೋಡಿಯಂ ಕಾರ್ಬೋನೇಟ್ ಪುಡಿಯಿಂದ ಸ್ವಲ್ಪ ಪುಡಿಯನ್ನು ಪ್ರತ್ಯೇಕವಾಗಿ ಮಾದರಿಗಾಗಿ ತೆಗೆದರು. ಅದಕ್ಕೆ ವಸ್ತು ಸಂ. 3 ಎಂದು ಗುರುತಿಸಿದರು. ಸೋಡಿಯಂ ಕಾರ್ಬೋನೇಟ್ ಮಿಶ್ರಣ ಮಾಡಿದ ಭಟ್ಟಿ ಇಳಿಸಿದ ನೀರಿನಿಂದ ಮಾದರಿಗಾಗಿ ಒಂದು ಖಾಲಿ ಬಾಟಲಿಯಲ್ಲಿ ಹಾಕಿ ಸಂಗ್ರಹಿಸಿದರು. ಅದಕ್ಕೆ ವಸ್ತು ಸಂ. 4 ಎಂದು ಗುರುತಿಸಿದರು. ನಂತರ ಫಿನಾಪ್ತಲಿನ್ ಪುಡಿ ಲೇಪನ ಮಾಡಿದ ಪಂಚ–1 ರವರ ಕೈ ಬೆರಳುಗಳನ್ನು ಆ ಬಟ್ಟಲಿನಲ್ಲಿ ಅದ್ದಿಸಿದರು. ಮೊದಲು ಬಣ್ಣ ರಹಿತವಾಗಿದ್ದ ಆ ದ್ರಾವಣ ಆಗ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ಆ ದ್ರಾವಣವನ್ನು ಒಂದು ಗಾಜಿನ ಪಾವಲಿ ಬಾಟಲಿಯಲ್ಲಿ ಹಾಕಿ ಸಂಗ್ರಹಿಸಿದರು. ಅದಕ್ಕೆ ವಸ್ತು ಸಂ. 5 ಎಂದು ಗುರುತಿಸಿದರು. ದೋಸಾ–17 ರವರು ಆಗ ಫಿರ್ಯಾದಿ ಮತ್ತು ಪಂಚರಿಗೆ ಯಾವ ರೀತಿ ಬಣ್ಣ ಪರಿವರ್ತನೆಯಾಗುತ್ತದೆ ಎಂದು ವಿವರಿಸಿ

ಹೇಳಿದರು. ನಂತರ ಒಂದು ಡಿಜಿಟಲ್ ವಾಯ್ಸ ರೆಕಾರ್ಡರ್ ಅನ್ನು ಫಿರ್ಯಾದಿಗೆ ದೋಸಾ-17 ರವರು ನೀಡಿದರು. ಅದನ್ನು ಯಾವ ರೀತಿ ಉಪಯೋಗಿಸಬೇಕೆಂದು ಹೇಳಿಕೊಟ್ಟರು. ಆರೋಪಿಯನ್ನು ಭೇಟಿ ಮಾಡಲು ಹೋದಾಗ ಅದನ್ನು ಚಾಲು ಮಾಡಿ ಇಟ್ಟುಕೊಂಡು ಹೋಗಬೇಕೆಂದು ಸೂಚಿಸಿದರು. ಪಂಚ-1 ರವರು ಫಿನಾಪ್ತಲಿನ್ ಪುಡಿ ಲೇಪನ ಮಾಡಿದ ಹಣವನ್ನು ಫಿರ್ಯಾದುದಾರನ ಅಂಗಿಯ ಎಡಕಿಸೆಯಲ್ಲಿ ದೋಸಾ-17 ರವರ ಸೂಚನೆ ಮೇರೆಗೆ ಇಟ್ಟರು. ಆ ನೋಟುಗಳನ್ನು ಫಿರ್ಯಾದುದಾರ ಮುಟ್ಟಬಾರದು ಎಂದು ತಿಳಿಸಿದರು. ಆರೋಪಿಯನ್ನು ಭೇಟಿ ಮಾಡಿದಾಗ ಆರೋಪಿ ಹಣಕ್ಕೆ ಬೇಡಿಕೆ ಇಟ್ಟರೆ ಮಾತ್ರ ಸದರಿ ಫಿನಾಪ್ತಲಿನ್ ಪುಡಿ ಲೇಪನ ಮಾಡಿದ ಹಣವನ್ನು ಆರೋಪಿಗೆ ಕೊಡಬೇಕು . ನಂತರ ಹೊರಗೆ ಬಂದು ಕರವಸ್ತ್ರದಿಂದ ಸನ್ನೆ ಮಾಡಬೇಕೆಂದು ಫಿರ್ಯಾದಿಗೆ ಸೂಚನೆ ನೀಡಿದರು. ಪಂಚ-1 ರವರಿಗೆ ಫಿರ್ಯಾದಿ ಜೊತೆ ಹೋಗಿ ಫಿರ್ಯಾದಿಯ ಹಿಂದೆ ಇದ್ದು ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸಬೇಕೆಂದು ಹೇಳಿದರು. ಮೇಲ್ಕಂಡ ವಸ್ತು ಸಂಖ್ಯೆ 1 ರಿಂದ 5 ಅನ್ನು ಅರಗಿನ ಮೊಹರು ಮೂಲಕ ಸೀಲ್ ಮಾಡಿ ಅವುಗಳಿಗೆ ಪಂಚರು ಮತ್ತು ತನಿಖಾಧಿಕಾರಿಯಾದ ದೋಸಾ-17 ರವರು ಸಹಿ ಮಾಡಿದ ಗುರುತಿನ ಚೀಟಿಯನ್ನು ಅಂಟಿಸಿದರು. ಅವುಗಳನ್ನು ಮತ್ತು ಆಗ ಉಪಯೋಗಿಸಿದ ಉಳಿದ ಫಿನಾಪ್ತಲಿನ್ , ಸೋಡಿಯಂ ಕಾರ್ಬೋನೇಟ್ ಪುಡಿ ಭಟ್ಟಿ ಇಳಿಸಿದ ನೀರನ್ನು ಕಚೇರಿಯಲ್ಲಿ ಕಪಾಟಿನಲ್ಲಿ ಇಟ್ಟು ಭದ್ರ ಪಡಿಸಿದರು. ಮೇಲ್ಕಂಡ ಪ್ರಕ್ರಿಯೆ ಎಲ್ಲಾ ಮಾಡಿದಾಗ ನಾನು ತನಿಖಾಧಿಕಾರಿಯವರ ನಿರ್ದೇಶನದಂತೆ ಛಾಯಾಚಿತ್ರ ತೆಗೆದೆ. ನಂತರ ಪಂಚರು , ಫಿರ್ಯಾದುದಾರ , ನಾವು ಸಿಬ್ಬಂದಿ ಮತ್ತು ತನಿಖಾಧಿಕಾರಿಗಳೆಲ್ಲರೂ ಸಾಬೂನು ಹಾಕಿಕೊಂಡು ನಮ್ಮ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಂಡೆವು . ಪಂಚನಾಮೆಯನ್ನು ದೋಸಾ-9 ರವರು ತನಿಖಾಧಿಕಾರಿಯವರ ನಿರ್ದೇಶನದಂತೆ ಇಲಾಖಾ ಲ್ಯಾಪಟಾಪ್ ನಲ್ಲಿ ಠಾಣೆಯಲ್ಲಿ ಬೆರಳಚ್ಚು ಮಾಡಿದರು. ಅಲ್ಲಿಯೇ ಅದನ್ನು ಮುದ್ರಣ ಮಾಡಿದರು. ಅದಕ್ಕೆ ಪಂಚರು, ಫಿರ್ಯಾದಿ , ತನಿಖಾಧಿಕಾರಿ ರುಜು ಮಾಡಿದೆವು .

2. ನಂತರ ಅದೇ ದಿನ ಟ್ರ್ಯಾಪ್ ಕಾರ್ಯಾಚರಣೆಗಾಗಿ ಸಂಜೆ 4.35 ಗಂಟೆಗೆ ಠಾಣೆಯಿಂದ ಎರಡು ಇಲಾಖಾ ಜೀಪ್ ನಲ್ಲಿ ಹೊರಟೆವು . ನಾವು ಕುಮಟಾಕ್ಕೆ ಸಂಜೆ 6.00 ಗಂಟೆಗೆ ತಲುಪಿದೆವು . ಅಲ್ಲಿಗೆ ತಲುಪಿದ ಮೇಲೆ ಫಿರ್ಯಾದಿ ಆರೋಪಿಗೆ ಕರೆ ಮಾಡಿದ . ಎಲ್ಲಿ

ಇದ್ದಿಯಾ ಎಂದು ಆರೋಪಿಯನ್ನು ಫಿರ್ಯಾದಿ ಕೇಳಿದ . ಆಗ ತಾಲೂಕು ಪಂಚಾಯತಿ ಕಚೇರಿಯಲ್ಲಿ ಇರುವುದಾಗಿ ಅಲ್ಲಿಗೆ ಬರುವಂತೆ ಆರೋಪಿ ಫಿರ್ಯಾದಿಗೆ ಹೇಳಿದ . ನಾವು ಆಗ ಸಂಜೆ 6.15 ಗಂಟೆಗೆ ಕುಮಟಾದ ಗಿಬ್ಸ್ ಪ್ರೌಢಶಾಲೆ ವೃತ್ತಕ್ಕೆ ಹೋದೆವು . ಅಲ್ಲಿ ತನಿಖಾಧಿಕಾರಿಯವರು ಪಂಚ-1 ಮತ್ತು ಫಿರ್ಯಾದಿಗೆ ಕಾಲ್ನಡಿಗೆಯಲ್ಲಿ ತಾಲೂಕು ಪಂಚಾಯತಿ ಕಚೇರಿಗೆ ಹೋಗುವಂತೆ ಹೇಳಿ ಪ್ರಾಯೋಗಿಕ  ಪಂಚನಾಮೆಯಲ್ಲಿ ನೀಡಿದ ಸೂಚನೆಗಳನ್ನು ಇನ್ನೊಮ್ಮೆ ನೀಡಿ ಫಿರ್ಯಾದುದಾರನಿಗೆ ಕೊಟ್ಟಿದ್ದ ಡಿಜಿಟಲ್ ವಾಯ್ಸ್ ರೆಕಾರ್ಡರ್ ಅನ್ನು ಚಾಲು ಮಾಡಿಕೊಳ್ಳುವಂತೆ ಹೇಳಿದರು . ಅವರನ್ನು ಆರೋಪಿಯ ಕಚೇರಿಗೆ ಕಳುಹಿಸಿದರು. ನಾವು ಉಳಿದವರು ಅವರನ್ನು ಹಿಂಬಾಲಿಸಿಕೊಂಡು ಹೋದೆವು . ಫಿರ್ಯಾದಿ ಮತ್ತು ಪಂಚ-1 ಆರೋಪಿಯ ಕಚೇರಿ ಒಳಗೆ ಹೋದರು. ನಾನು , ಆರಕ್ಷಕ ನಿರೀಕ್ಷಕರು, ದೋಸಾ-8 A-1 ಜೆರಾಕ್ಸ್ ಅಂಗಡಿ ಬಳಿ ನಿಂತುಕೊಂಡೆವು . ಫಿರ್ಯಾದಿ ಸನ್ನೆಗಾಗಿ ಕಾಯುತ್ತಾ ನಿಂತೆವು . ದೋಸಾ-17 ಮತ್ತು ಪಂಚ-2 ರವರು ಆರೋಪಿಯ ಕಚೇರಿಯ ಮುಂದೆ ಇರುವ ಟಾರ್ ರಸ್ತೆಯಲ್ಲಿ 30 ಅಡಿ ಅಂತರದಲ್ಲಿ ನಿಂತುಕೊಂಡು ನೋಡುತ್ತಿದ್ದರು. ಸಂಜೆ 6.30 ಗಂಟೆಗೆ ಆ ಕಚೇರಿಯ ದ್ವಿಚಕ್ರ ವಾಹನದ ನಿಲುಗಡೆ ಜಾಗಕ್ಕೆ ಫಿರ್ಯಾದಿ ಬಂದು ಕರವಸ್ತ್ರ ತೋರಿಸಿ ಸನ್ನೆ ಮಾಡಿದ . ಆಗ ನಾವೆಲ್ಲಾ ಸೇರಿ ಅಲ್ಲಿಗೆ ಓಡಿ ಹೋದೆವು . ಆಗ ಫಿರ್ಯಾದುದಾರ ನಮಗೆ ಆರೋಪಿ ಲಂಚದ ಹಣವನ್ನು ಪಡೆದು ತನ್ನ ಪ್ಯಾಂಟಿನ ಬಲಕಿಸೆಯಲ್ಲಿ ಹಾಕಿಕೊಂಡು ಬೈಕ್ ಏರಿ ಅಲ್ಲಿಂದ ಹೊರಟು ಹೋದ ಎಂದು ತಿಳಿಸಿದ . ಆಗ ನಾವು ಎಲ್ಲರೂ ಆರೋಪಿಯನ್ನು ಹಿಂಬಾಲಿಸಿಕೊಂಡು ಅವನನ್ನು ಹಿಡಿಯಲು ಹೋದೆವು . ನಂತರ ಶಾಂತಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿಯನ್ನು ಅಡ್ಡ ಹಾಕಿ ರಾತ್ರಿ 8.40 ಗಂಟೆಗೆ ಹಿಡಿದೆವು. ಆ ಮಧ್ಯದಲ್ಲಿ ಆರೋಪಿ ಹೋದ ದಾರಿ ತಪ್ಪಿದ್ದರಿಂದ ಅವನನ್ನು ಹುಡುಕುತ್ತಿದ್ದೆವು. ರಾತ್ರಿ 8.40 ಗಂಟೆಗೆ ಆರೋಪಿಯನ್ನು ನಾವು ತಡೆದಾಗ ಆರೋಪಿ ತನ್ನ ಕಿಸೆಯಲ್ಲಿ ಇದ್ದ ಲಂಚದ ಹಣವನ್ನು ತೆಗೆದು ಪಕ್ಕದಲ್ಲಿದ್ದ ಗಿಡಗಂಟಿಗಳಲ್ಲಿ ಬಿಸಾಡಿದ . ಪಂಚ-1 ಆ ಹಣವನ್ನು ತನಿಖಾಧಿಕಾರಿಯವರ ನಿರ್ದೇಶನದ ಮೇರೆಗೆ ತೆಗೆದು ಆರಿಸಿಕೊಂಡರು. ಅದನ್ನು ಪರಿಶೀಲಿಸಿ ಅದೇ ಲಂಚದ ಹಣ ಪ್ರಾಯೋಗಿಕ  ಪಂಚನಾಮೆ ಸಮಯದಲ್ಲಿ ನೀಡಿದ ಹಣ ಆಗಿದೆ ಎಂದು ಹೇಳಿದರು. ತನಿಖಾಧಿಕಾರಿ ಆಗ ಆ ಹಣವನ್ನು ವಶಪಡಿಸಿಕೊಂಡು ಅದನ್ನು ಲಕೋಟೆಯಲ್ಲಿ ಹಾಕಿ ಮೊಹರು ಮಾಡಿ ಜಪ್ತು ಮಾಡಿದರು. ಅದಕ್ಕೆ ವಸ್ತು ಸಂ. 6 ಎಂದು

ಗುರುತಿಸಿದರು. ಆರೋಪಿ ಅವನ ಕಚೇರಿ ಬಳಿ ಲಂಚದ ಹಣ ತೆಗೆದುಕೊಂಡ ಮೇಲೆ ಫಿರ್ಯಾದಿ ಸನ್ನೆ ನೀಡುವುದನ್ನು ಮತ್ತು ನಾವು ಅಲ್ಲಿಗೆ ಓಡಿ ಹೋಗುವುದನ್ನು ಬಹುಶಃ ಗಮನಿಸಿ ಆ ರೀತಿ ಬೈಕ್ ಏರಿ ಅಲ್ಲಿಂದ ಓಡಿ ಹೋಗಿದ್ದ . ಅಲ್ಲಿ ವಶಪಡಿಸಿಕೊಂಡ ನೋಟುಗಳ ಸಂಖ್ಯೆಗಳು ಪ್ರಾಯೋಗಿಕ  ಪಂಚನಾಮೆ ಸಮಯದಲ್ಲಿ ವಹಿಸಿಕೊಟ್ಟಿದ್ದ ನೋಟುಗಳಿಗೆ ತಾಳೆಯಾಗಿದ್ದರಿಂದ ಆರೋಪಿಯನ್ನು ಅವನನ್ನು ಹಿಡಿದ ಸ್ಥಳದಲ್ಲಿಯೇ ವಶಕ್ಕೆ ತೆಗೆದುಕೊಳ್ಳಲು ಹೇಳಿದರು. ಅದರ ಪ್ರಕಾರ ದೋಸಾ-9 ಮತ್ತು 7 ರವರು ತನಿಖಾಧಿಕಾರಿಯವರ ನಿರ್ದೇಶನದಂತೆ ಆಗ ಆರೋಪಿಯ ಎರಡೂ ಕೈಗಳನ್ನು ಹಿಡಿದುಕೊಂಡರು. ಆರೋಪಿಯನ್ನು ಹಿಡಿದ ಜಾಗದಲ್ಲಿ ದೀಪದ ಬೆಳಕು ಇರಲಿಲ್ಲವಾದ್ದರಿಂದ ಅಲ್ಲಿ ಪಂಚನಾಮೆ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಆರೋಪಿಯನ್ನು ಕರೆದುಕೊಂಡು ಪಂಚರು , ಫಿರ್ಯಾದಿ ನಮ್ಮ ಸಿಬ್ಬಂದಿ ಮತ್ತು ತನಿಖಾಧಿಕಾರಿ ಕುಮಟಾದ ಪ್ರವಾಸಿ ಮಂದಿರಕ್ಕೆ ಹೋದರು. ನಾನು ಆರೋಪಿಯ ಬೈಕ್ ಅನ್ನು ಅಲ್ಲಿಂದ ತೆಗೆದುಕೊಂಡು ಪ್ರವಾಸಿ ಮಂದಿರದ ಬಳಿಗೆ ಮೇಲ್ಕಂಡವರು ಹೋದ ಜೀಪನ್ನು ಹಿಂಬಾಲಿಸಿಕೊಂಡು ಹೋದೆ .

3. ಪ್ರವಾಸಿ ಮಂದಿರಕ್ಕೆ ತಲುಪಿದ ಮೇಲೆ ತನಿಖಾಧಿಕಾರಿಯವರು ದೋಸಾ-11 ರವರಿಗೆ ಎರಡು ಪಿಂಗಾಣಿ ಬಟ್ಟಲುಗಳನ್ನು ಸ್ವಚ್ಛವಾಗಿ ತೊಳೆಯಲು ಹೇಳಿದರು. ಅದರಂತೆ ಅವರು ಎರಡು ಪಿಂಗಾಣಿ ಬಟ್ಟಲುಗಳನ್ನು ಸ್ವಚ್ಛವಾಗಿ ತೊಳೆದರು ಮತ್ತು ಅದರಲ್ಲಿ ಭಟ್ಟಿ ಇಳಿಸಿದ ನೀರು ಹಾಗೂ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ತನಿಖಾಧಿಕಾರಿ ನಿರ್ದೇಶನದ ಮೇರೆಗೆ ಹಾಕಿ ದ್ರಾವಣ ತಯಾರಿಸಿದರು. ಆಗ ಆರೋಪಿಯ ಬಲಗೈಯನ್ನು ಒಂದು ಪಿಂಗಾಣಿ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಅದ್ದಿಸಿ ತೊಳೆದರು. ಅದು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ಮೊದಲು ಅದು ಬಣ್ಣ ರಹಿತವಾಗಿತ್ತು . ನಂತರ ಅದೇ ರೀತಿ ಆರೋಪಿಯ ಎಡಗೈಯನ್ನು ಇನ್ನೊಂದು ಪಿಂಗಾಣಿ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಅದ್ದಿಸಿ ತೊಳೆದರು. ಅದು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ಮೊದಲು ಅದು ಬಣ್ಣ ರಹಿತವಾಗಿತ್ತು . ಬಲಗೈ ತೊಳೆದ ದ್ರಾವಣವನ್ನು ಎರಡು ಖಾಲಿ ಬಾಟಲಿಯಲ್ಲಿ ಹಾಕಿ ಎಡಗೈ ತೊಳೆದ ದ್ರಾವಣವನ್ನು ಮತ್ತೆರಡು ಖಾಲಿ ಬಾಟಲಿಯಲ್ಲಿ ಸಂಗ್ರಹಿಸಿ ಅವುಗಳಿಗೆ ವಸ್ತು ಸಂ. 7, 7 ಎ, 8, 8 ಎ ಎಂದು ಗುರುತಿಸಿದರು. ನಂತರ ಆರೋಪಿಯ ತಮ್ಮನಿಗೆ ಆರೋಪಿಗೆ ಬೇರೆ

ಪ್ಯಾಂಟು ತರುವಂತೆ ಹೇಳಿದರು. ಬೇರೆ ಪ್ಯಾಂಟು ತಂದ ಮೇಲೆ ಆರೋಪಿಗೆ ಆ ಪ್ಯಾಂಟನ್ನು ನೀಡಿ ಅವನು ಧರಿಸಿದ್ದ ಪ್ಯಾಂಟ್ ಅನ್ನು ತೆಗೆಸಿ ಮತ್ತೊಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ಮತ್ತು ಭಟ್ಟಿ ಇಳಿಸಿದ ನೀರು ಹಾಕಿ ದ್ರಾವಣ ತಯಾರಿಸಿ ಅದರಲ್ಲಿ ಆ ಪ್ಯಾಂಟಿನ ಬಲಕಿಸೆಯ ಒಳಭಾಗವನ್ನು ಅದ್ದಿ ತೊಳೆದರು. ಆಗ ಬಣ್ಣ ರಹಿತವಾಗಿದ್ದ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಖಾಲಿ ಗಾಜಿನ ಬಾಟಲಿಯಲ್ಲಿ ಹಾಕಿ ಅದಕ್ಕೆ ವಸ್ತು ಸಂ. 9 ಎಂದು ಗುರುತಿಸಿದರು. ಆ ಪ್ಯಾಂಟ್ ಅನ್ನು ವಸ್ತು ಸಂ. 9 ಎ ಎಂದು ಗುರುತಿಸಿದರು. ಅದನ್ನು ಒಂದು ಲಕೋಟೆಯಲ್ಲಿ ಹಾಕಿ ಮೊಹರು ಮಾಡಿದರು. ಮೇಲ್ಕಂಡ ಎಲ್ಲಾ ವಸ್ತುಗಳಿಗೆ ಎ ಎಂಬ ಆಂಗ್ಲ ಅಕ್ಷರದಿಂದ ಅರಗು ಹಾಕಿ ಮೊಹರು ಮಾಡಿ ಪಂಚರು ಮತ್ತು ತನಿಖಾಧಿಕಾರಿಯವರು ರುಜು ಮಾಡಿದ ಗುರುತಿನ ಚೀಟಿಯನ್ನು ಅಂಟಿಸಿದರು. ನಂತರ ಆರೋಪಿಗೆ ಘಟನೆ ಬಗ್ಗೆ ಸ್ವಖುಷಿ ಹೇಳಿಕೆ ಬರೆದುಕೊಡುವಂತೆ ತನಿಖಾಧಿಕಾರಿ ಕೇಳಿದರು. ಆರೋಪಿ ತನ್ನ ಹೇಳಿಕೆ ಬರೆದುಕೊಟ್ಟ . ಆ ಹೇಳಿಕೆಯನ್ನು ಫಿರ್ಯಾದಿ ಮತ್ತು ಪಂಚ-1 ರವರು ಒಪ್ಪಲಿಲ್ಲ. ನಂತರ ದೋಸಾ-17 ರವರು ಫಿರ್ಯಾದಿಗೆ ಸಂಬಂಧಪಟ್ಟ ಅರ್ಜಿಯ ದಾಖಲಾತಿಗಳನ್ನು ಹಾಜರುಪಡಿಸುವಂತೆ ಆರೋಪಿಗೆ ಹೇಳಿದರು. ಆರೋಪಿ ಮೊದಲು ಕಚೇರಿಯಲ್ಲಿ ಆ ದಾಖಲಾತಿಗಳು ಇವೆ ಎಂದು ಹೇಳಿ ನಂತರ ತನ್ನ ಬೈಕ್ ನಲ್ಲಿ ಇದೆ ಎಂದು ತನ್ನ ಬೈಕ್ ಡಿಕ್ಕಿಯಿಂದ ಅವುಗಳನ್ನು ತೆಗೆದು ನೀಡಿದ . ಅವುಗಳನ್ನು 1 ರಿಂದ 29 ಎಂದು ಹಾಳೆ ಸಂಖ್ಯೆ ನಮೂದಿಸಿ ಅದಕ್ಕೆ ಪಂಚರು ಮತ್ತು ತನಿಖಾಧಿಕಾರಿ ರುಜು ಮಾಡಿ ನಂತರ ಅದರ ನೆರಳಚ್ಚು ಪ್ರತಿ ಮಾಡಿ ಫಿರ್ಯಾದಿ ಕಡೆಯಿಂದ ನೆರಳಚ್ಚು ಪ್ರತಿಗಳನ್ನು ದೃಢೀಕರಣ ಮಾಡಿಸಿ ಮೂಲ ಕಡತವನ್ನು ಫಿರ್ಯಾದಿಗೆ ಕೊಟ್ಟು ಆ ಪೈಕಿ 1 ರಿಂದ 11 ನೇ ದಾಖಲಾತಿಗಳನ್ನು ವಾಪಸ್ಸು ದೋಸಾ-17 ರವರು ತೆಗೆದುಕೊಂಡರು. ನಂತರ ಫಿರ್ಯಾದಿಯಿಂದ ಡಿಜಿಟಲ್ ವಾಯ್ಸು ರೆಕಾರ್ಡರ್ ಅನ್ನು ಪಡೆದು ಅದನ್ನು ಆಲಿಸಿದಾಗ ಅದರಲ್ಲಿ ಧ್ವನಿ ಸರಿಯಾಗಿ ಕೇಳುತ್ತಿರಲಿಲ್ಲ. ಮೇಲ್ಕಂಡ ಎಲ್ಲಾ ಪ್ರಕ್ರಿಯೆ ಸಮಯದಲ್ಲಿ ತನಿಖಾಧಿಕಾರಿಯವರ ನಿರ್ದೇಶನದ ಮೇರೆಗೆ ನಾನು ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ಕುಮಟಾದ ಪ್ರವಾಸಿ ಮಂದಿರದಲ್ಲಿ ತನಿಖಾಧಿಕಾರಿಯವರ ನಿರ್ದೇಶನದ ಮೇರೆಗೆ ದೋಸಾ-9 ರವರು ಇಲಾಖಾ ಲ್ಯಾಪಟಾಪ್ ನಲ್ಲಿ ಬೆರಳಚ್ಚು ಮಾಡಿದರು. ರಾತ್ರಿ 8.40 ರಿಂದ ಮಾರನೇ ದಿನ ಬೆಳಿಗ್ಗೆ 1.00 ಗಂಟೆವರೆಗೆ ಪಂಚನಾಮೆಯನ್ನು ಮಾಡಿದರು. ಅದನ್ನು ಅಲ್ಲಿಯೇ ನಮ್ಮ ಜೊತೆ

ತೆಗೆದುಕೊಂಡು ಹೋಗಿದ್ದ ಇಲಾಖಾ ಪ್ರಿಂಟರ್ ನಲ್ಲಿ ಮುದ್ರಣ ಮಾಡಿದರು. ಅದಕ್ಕೆ ಪಂಚರು, ಫಿರ್ಯಾದಿ , ತನಿಖಾಧಿಕಾರಿ ಹಾಗೂ ಗಣಕೀಕರಣ ಮಾಡಿದ ದೋಸಾ-9 ರವರು ರುಜು ಮಾಡಿದರು. ಕೃತ್ಯದ ಸ್ಥಳದ ಕಚ್ಚಾ ನಕಾಶೆಯನ್ನು ತನಿಖಾಧಿಕಾರಿ ಅಲ್ಲಿಯೇ ತಯಾರಿಸಿದರು.

4. ನಂತರ ಆರೋಪಿ ಕಚೇರಿಗೆ ಹೋದೆವು . ಅಲ್ಲಿ ಆವಕ ಜಾವಕ ವಹಿ ಮತ್ತು ಹಾಜರಾತಿ ಪುಸ್ತಕ ಪರಿಶೀಲಿಸಿದೆವು . ಅದರಲ್ಲಿ ಫಿರ್ಯಾದಿಗೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳು ಇರಲಿಲ್ಲ. ಹಾಜರಾತಿ ಪುಸ್ತಕದಲ್ಲಿ ಆ ದಿನ ಆರೋಪಿ ಸಹಿ ಮಾಡಿರಲಿಲ್ಲ. ಆರೋಪಿ ಕಚೇರಿಯಲ್ಲಿ ಯಾವುದೇ ವಸ್ತು ಅಥವಾ ದಾಖಲೆ ಜಪ್ತು ಮಾಡಿಲ್ಲ. ನಂತರ ಆರೋಪಿಯನ್ನು ಜೊತೆಯಲ್ಲಿ ಕರೆದುಕೊಂಡು ನಾವೆಲ್ಲರೂ ಕಾರವಾರದ ನಮ್ಮ ಠಾಣೆಗೆ ವಾಪಸ್ಸು ಬಂದೆವು. ಆರೋಪಿಯ ಬೈಕ್ ಅನ್ನು ನಾನು ಕುಮಟಾದ ಪ್ರವಾಸಿ ಮಂದಿರದ ಬಳಿ ಬಿಟ್ಟ ಮೇಲೆ ಅದನ್ನು ಯಾರಿಗೆ ಕೊಟ್ಟರು ಎಂದು ನಾನು ಗಮನಿಸಲಿಲ್ಲ.

5. ಈಗ ನೋಡಿದ ನಿ.ಪಿ. 6 ರಿಂದ 18 ಛಾಯಾಚಿತ್ರಗಳನ್ನು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ತೆಗೆದಿರುತ್ತೇನೆ. ಈಗ ನೋಡಿದ ನಿ.ಪಿ. 19 ರಿಂದ 37 ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ತೆಗೆದ ಛಾಯಾಚಿತ್ರ ಆಗಿವೆ. ನಿ.ಪಿ. 23 ಕರಿಂದ 25 ಛಾಯಾಚಿತ್ರದಲ್ಲಿ ಪ್ರವಾಸಿ ಮಂದಿರದಲ್ಲಿ ಆರೋಪಿಯ ಕೈಗಳನ್ನು ತೊಳೆಯುವುದು ಕಾಣುತ್ತದೆ. ನಿ.ಪಿ. 37, 19, 20 ಮತ್ತು 21 ಛಾಯಾಚಿತ್ರಗಳಲ್ಲಿ ಆರೋಪಿ ಹಣ ಬಿಸಾಡಿದ ಜಾಗ ಮತ್ತು ಬಿಸಾಡಿದ ಹಣ ಕಾಣುತ್ತದೆ .

(ಈ ಹಂತದಲ್ಲಿ 2.00 ಗಂಟೆಯಾಗಿದ್ದರಿಂದ ಮಧ್ಯಾಹ್ನ 2.45 ಗಂಟೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ

ಸಾಕ್ಷಿಯನ್ನು ಪುನಃ ಮಧ್ಯಾಹ್ನ 2.45 ಗಂಟೆಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

6. ಪ್ರಾಯೋಗಿಕ ಪಂಚನಾಮೆ ಮತ್ತು ಟ್ರ್ಯಾಪ್ ಪಂಚನಾಮೆ ಕಾಲದಲ್ಲಿ ಜಪ್ತು ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ವಸ್ತು ಸಂ. 1, 2, 3, 4 ಮತ್ತು 5 ಅನ್ನು ನ್ಯಾಯಾಲಯದ ಮುಂದೆ ನೋಡಿದ್ದು ಅವುಗಳು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿದ ವಸ್ತುಗಳೇ ಆಗಿವೆ. ಅವುಗಳನ್ನು ಮು.ಮಾ. 2 ರಿಂದ 6 ಎಂದು ಗುರುತಿಸಲಾಗಿದೆ . ಈಗ ನ್ಯಾಯಾಲಯದ ಮುಂದೆ ವಸ್ತು ಸಂ. 7, 8, 9, 9 ಎ ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿದ ವಸ್ತುಗಳು ಆಗಿವೆ . ಅವುಗಳನ್ನು ಗುರುತಿಸಿರುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ. 7 ರಿಂದ 10 ಎಂದು ಗುರುತಿಸಲಾಗಿದೆ . ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಜಪ್ತು ಮಾಡಿದ ನೋಟುಗಳನ್ನು ಗುರುತಿಸುತ್ತೇನೆ. ಈಗ ನನಗೆ ನ್ಯಾಯಾಲಯದ ಮುಂದೆ ತೋರಿಸಿದ ರೂ. 1,000/-ದ 2 ನೋಟು ಹಾಗೂ ರೂ. 500/- ರ 2 ನೋಟು ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಆರೋಪಿಯನ್ನು ಹಿಡಿದ ಜಾಗದಲ್ಲಿ ಶಾಂತಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿ ಬಿಸಾಡಿದಾಗ ಜಪ್ತು ಮಾಡಿದ ಹಣವೇ ಆಗಿರುತ್ತದೆ . ಸಾಕ್ಷಿ ಆ ಹಣವನ್ನು ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ . ನಾನು ಮೇಲೆ ಹೇಳಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಆರೋಪಿ ಇದ್ದಾನೆ ಎಂದು ಸಾಕ್ಷಿ ಆರೋಪಿಯನ್ನು ಗುರುತಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಪಿ ಸಿ ಕೆ ರವರು**

ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಾಕ್ಷಿಗೆ ರೂ. 500/- ಭತ್ಯೆ ಪಾವತಿ ಮಾಡಿದ್ದಾರೆ. ಪಾಟೀ ಸವಾಲನ್ನು ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರ ಕನ್ನಡ , ಕಾರವಾರ